# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 973 |
| ಸದಸ್ಯರ ಹೆಸರು | : ಶ್ರೀ ಐವನ್ ಡಿ'ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 20-08-2025 |

| | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಎಲೆಕ್ಟ್ರಿಕಲ್ ಚಾಲಿತ (ಇವಿ) ವಾಹನ ಸಾರ್ವಜನಿಕ ವಲಯದಲ್ಲಿ ಸಂಚರಿಸಲು ರಾಜ್ಯ ಸರ್ಕಾರದಿಂದ ರಹದಾರಿ (ಪರ್ಮಿಟ್) ನೀಡಲಾಗುತ್ತಿದೆಯೇ; ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಯೇನು; | ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 3 ಟಿಡಿಓ 2019, ದಿನಾಂಕ: 01-07-2025 ರಲ್ಲಿ ಹೊಸದಾಗಿ ನೋಂದಣಿಯಾಗುವ ಮತ್ತು ಈಗಾಗಲೇ ನೋಂದಣಿಯಾಗಿರುವ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಇದುವರೆಗೆ ರಹದಾರಿ ಪಡೆಯದೆ ಸಂಚರಿಸುತ್ತಿರುವ ಎಲ್ಲಾ ಸಾರಿಗೆ ವಾಹನಗಳಿಗೆ ಸಂಬಂಧಿಸಿದ ರಹದಾರಿಯನ್ನು ಶುಲ್ಕ ರಹಿತವಾಗಿ ಮಂಜೂರು ಮಾಡಲು ಹಾಗೂ ವಿತರಿಸಲು ಅನುಮತಿ ನೀಡಲಾಗಿರುತ್ತದೆ. ಅದರಂತೆ, ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು ಮುಂದಿನ ದಿನಗಳಲ್ಲಿ ರಹದಾರಿಯನ್ನು ನೀಡುವ ಕುರಿತು ಕ್ರಮ ವಹಿಸಲಾಗುತ್ತದೆ.<br>ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: S.O 5333 (E), ದಿನಾಂಕ:18-10-2018 ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66(3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರದಡಿ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಸಾರಿಗೆ ವಾಹನಗಳು ಹಾಗೂ ಬ್ಯಾಟರಿ ಆಧಾರಿತ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಹದಾರಿ ವಿನಾಯತಿ ನೀಡಲಾಗಿರುತ್ತದೆ.<br>ಎಲೆಕ್ಟ್ರಿಕಲ್ ವಾಹನಗಳನ್ನು ಪರವಾನಿಗೆ ಇಲ್ಲದೆ ಸಂಚರಿಸುತ್ತಿರುವುದರಿಂದ ಸಾರ್ವಜನಿಕ ವಲಯದಲ್ಲಿ ಗೊಂದಲ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 3 ಟಿಡಿಓ 2019, ದಿನಾಂಕ:01-07-2025 ರಲ್ಲಿ, ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3)(ಎನ್) ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಹದಾರಿ ವಿನಾಯತಿ ನೀಡಿ |
| ಆ. | ರಾಜ್ಯದಲ್ಲಿ ಸಾರ್ವಜನಿಕವಾಗಿ ಸಂಚರಿಸುವ ಸರ್ಕಾರಿ ಬಸ್ಸು ಟ್ಯಾಕ್ಸಿ ಮತ್ತು ಟೆಂಪೋಗಳು ಸಾರ್ವಜನಿಕ ವಲಯದಲ್ಲಿ ವಾಹನಗಳಿಗೆ ರಹದಾರಿ ಪರವಾನಿಗೆ ತೆಗೆದು ಎಲೆಕ್ಟ್ರಿಕಲ್ ವಾಹನಗಳನ್ನು ಪರವಾನಿಗೆ ಇಲ್ಲದೆ ಸಂಚರಿಸುತ್ತಿರುವುದರಿಂದ ಸಾರ್ವಜನಿಕ ವಲಯದಲ್ಲಿ ಗೊಂದಲ ಉಂಟಾದ ಕುರಿತು ಸರ್ಕಾರದ ಗಮನಕ್ಕೆ | |

| | ಪ್ರಶ್ನೆ | ಉತ್ತರ |
|---|---|---|
| | ಬಂದಿದೆಯೇ; ಈ ಬಗ್ಗೆ ಯಾವ ಮಾನದಂಡ ಅಳವಡಿಸಲು ಚಿಂತಿಸಲಾಗಿದೆ; (ವಿವರ ನೀಡುವುದು) | ಹೊರಡಿಸಲಾಗಿದ್ದ ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಓ 2019, ದಿನಾಂಕ: 20-01-2022ಅನ್ನು ಹಿಂಪಡೆದು, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಹಿತದೃಷ್ಠಿಯಿಂದ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 66(3)(ಎನ್) ಮತ್ತು ಸದರಿ ಕಾಯ್ದೆಯ ಕಲಂ 96(xxxiii)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಹೊಸದಾಗಿ ನೋಂದಣಿಯಾಗುವ ಮತ್ತು ಈಗಾಗಲೇ ನೋಂದಣಿಯಾಗಿರುವ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಇದುವರೆಗೆ ರಹದಾರಿ ಪಡೆಯದೆ ಸಂಚರಿಸುತ್ತಿರುವ ಎಲ್ಲಾ ಸಾರಿಗೆ ವಾಹನಗಳಿಗೆ ಸಂಬಂಧಿಸಿದ **ರಹದಾರಿಯನ್ನು ಶುಲ್ಕ ರಹಿತವಾಗಿ ಮಂಜೂರು ಮಾಡಲು ಹಾಗೂ ವಿತರಿಸಲು ಅನುಮತಿ ನೀಡಲಾಗಿರುತ್ತದೆ.** |
| ಇ. | ಕೆ.ಎಸ್.ಆರ್.ಟಿ.ಸಿ. ಯಲ್ಲಿ ಪ್ರಸ್ತುತ ಚಾಲನೆಯಲ್ಲಿರುವ ಇವಿ ಬಸ್ಸುಗಳ ಸಂಖ್ಯೆ ಎಷ್ಟು; ಪ್ರತಿ ಬಸ್‌ಗೆ ತಗಲುವ ವೆಚ್ಚ ಎಷ್ಟು; ಸಾರಿಗೆ ಇಲಾಖೆಗೆ ಇದು ಲಾಭದಾಯಕವೇ? (ವಿವರ ನೀಡುವುದು) | ಕೆ.ಎಸ್.ಆರ್.ಟಿ.ಸಿ. ಯಲ್ಲಿ FAME-II ಯೋಜನೆ ಅಡಿಯಲ್ಲಿ 50 ಸಂಖ್ಯೆಯ ಹವಾನಿಯಂತ್ರಿತ 12 ಮೀಟರ್‌ನ ಎಲೆಕ್ಟ್ರಿಕ್ ಬಸ್ಸುಗಳು ಚಾಲನೆಯಲ್ಲಿರುತ್ತವೆ.<br><br>ಸದರಿ 50 ವಿದ್ಯುತ್ ಚಾಲಿತ ಬಸ್ಸುಗಳನ್ನು ಜಿ.ಸಿ.ಸಿ (The Gross Cost Contract) ಮಾದರಿಯಲ್ಲಿ ಕಾರ್ಯಾಚರಣೆ ಮಾಡುತ್ತಿದ್ದು, ವಾಹನಗಳ ಆಚರಣೆಯನ್ನು ಬಸ್ ಕಂಪನಿಯವರೊಂದಿಗೆ ಮಾಡಿಕೊಂಡ ಒಪ್ಪಂದದಂತೆ, ಕಂಪನಿಗೆ ಪ್ರತಿ ಕಿ.ಮೀಗೆ ರೂ.55/-ರಂತೆ ಪಾವತಿಸುತ್ತಿದ್ದು, ನಿರ್ವಾಹಕ ವೆಚ್ಚ ಹಾಗೂ ಹೆಚ್ಚುವರಿ ವೆಚ್ಚ ಸೇರಿದಂತೆ ಪ್ರತಿ ಕಿ.ಮೀಗೆ ಒಟ್ಟಾರೆ ರೂ.65/- ಒಟ್ಟಾರೆ ವೆಚ್ಚ ತಗಲುತ್ತಿದೆ. ಸದರಿ ಸೇವೆಗಳ ಕಾರ್ಯಾಚರಣೆಯಿಂದ ಪ್ರತಿ ಕಿ.ಮೀಗೆ ಸರಾಸರಿ ರೂ.69.79/- ಆದಾಯ ಗಳಿಸುತ್ತಿದ್ದು, ಪ್ರಸ್ತುತ ಸದರಿ ಸೇವೆಗಳು ಲಾಭದಾಯಕವಾಗಿರುತ್ತವೆ. |

**ಟಿಡಿ 60 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು